ಮೂಲಕ ಬೆಂಗಳೂರಿನ ಖಜಾನೆ ಕೇಂದ್ರದಲ್ಲಿ ಗುರುತಿಸಿ ಜಿಲ್ಲಾ ಮತ್ತು ತಾಲ್ಲೂಕು ಖಜಾನೆಗಳ ಹಂತದಲ್ಲಿ ಅಂಚೆ ಕಛೇರಿಗಳ ಮೂಲಕ ಪಾವತಿ ಮಾಡಲಾಗುತ್ತಿದೆ. ಸದರಿ ಗಣಕ ಕೇಂದ್ರದ ಗಣಕೀ ಯಂತ್ರವು ಒಮ್ಮಿಂದೊಮ್ಮೆಲೇ ಕೆಟ್ಟು ಹೋದ ಕಾರಣ ಮಾರ್ಚ್ 95ರಲ್ಲಿ ಸರ್ಕಾರೀ ತಾಂತ್ರಿಕ ಸಲಹಾ ಸಮಿತಿಯು ನೀಡಿದ ಅನುಮೋದನೆಯ ಮೇರೆಗೆ ಮೇ 1995ರಲ್ಲಿ ಸದರಿ ನೂತನ ಗಣಕ ಯಂತ್ರವನ್ನು ಖರೀದಿಸಿ ಸಾಗಿಸಲಾತು. ಅಂದಿನಿಂದ ಬಾಕಿಯಾದ ಜನವರಿ 1995ರಿಂದ ಜೂನ್ 1995ರ ವರೆಗಿನ ಆರು ತಿಂಗಳ ಬಾಕಿ ಪಾವತಿಯ ಮನಿಯಾರ್ಡರ್ ನಮೂನೆಗಳನ್ನು ಕೂಡಲೇ ಮುದ್ರಿಸಿ ಜುಲೈ 1995 ರೊಳಗಾಗಿ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕುಗಳಿಗೆ (ಕಛೇರಿಗಳಿಗೆ) ಕಳುಹಿಸಿ ಅಂಚೆ ಕಛೇರಿಯ ಮೂಲಕ ಪಾವತಿಸುವ ವಿರ್ಪಾಡು ಮಾಡಲಾಗಿದೆ. ಜುಲೈ ಮತ್ತು ಆಗಸ್ಟ್ 1995ರ ಎರಡು ತಿಂಗಳುಗಳ ಮುಂದಿನ ಬಾಕಿ ಕುರಿತಂತೆ ಮನಿಯಾರ್ಡರ್ ನಮೂನೆಗಳನ್ನು ಆಗಸ್ಟ್ 1995ರಲ್ಲಿ ಒಂದೇ ಕಂತಿನಲ್ಲಿ ಮುದ್ರಿಸಿ ಈಗಾಗಲೇ ಮುಂಚಿತವಾಗಿ ಎಲ್ಲಾ ಜಿಲ್ಲಾ ಖಜಾನೆಗಳಿಗೆ ಕಳುಹಿಸಲಾಗಿದೆ. ಈ ಮನಿಯಾರ್ಡರ್ಗಳು ಬಹುತೇಕ 1995ರ 9ನೇ ತಿಂಗಳ ನಂತರವೇ ಪಾವತಿಯಾಗಬೇಕಾಗಿರುತ್ತದೆ. ಈಗ ಖಜಾನೆ ಗಣಕ ಕೇಂದ್ರದ ಗಣಕ ಯಂತ್ರವು ಸುಸ್ಥಿತಿಯಲ್ಲಿ ನಿರ್ವಹಿಸುತ್ತಿದೆಯಾದ್ದರಿಂದ ಇನ್ನು ಮುಂದಿನ ಯಾವುದೇ ಪಾವತಿಗಳನ್ನು ಬಾಕಿಯಾಗದಂತೆ ನೋಡಿಕೊಳ್ಳಲಾಗುವುದು.

(ii) ಸರ್ಕಾರಿ ನೌಕರರಿಗೆ ವಾಹನ ಮುಂಗಡ ಹಣ ಬಿಡುಗಡೆಯಾಗದಿರುವ ಬಗ್ಗೆ

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರೀ ನೌಕರರಿಗೆ ವಾಹನ ಮುಂಗಡ ಹಣಕ್ಕಾಗಿ ಕೋರಿ ವಿವಿಧ ಇಲಾಖೆಗಳಿಂದ ಆರ್ಥಿಕ ಇಲಾಖೆಗೆ ಮಾರ್ಚ್ ತಿಂಗಳಿನಲ್ಲಿಯೇ ಮನವಿಗಳನ್ನು ಸಲ್ಲಿಸಲಾಗಿದ್ದು, ಈವರೆವಿಗೂ ಈ ಹಣವನ್ನು ಬಿಡುಗಡೆ ಮಾಡಲು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಇದಕ್ಕೆ ಕಾರಣಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ನಾನು ಹಣಕಾಸಿನ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡುತ್ತಿದ್ದೇನೆ. ಕಳೆದ ವರ್ಷದ 1994-95ನೇ ಸಾಲಿನಲ್ಲಿ 314.45 ಲಕ್ಷ ರೂ.ಗಳನ್ನು ವಾಹನಗಳಿಗಾಗಿ ಕೊಡಲಾಗಿದೆ. ಈ ವರ್ಷ ಮುಂಗಡ ಪತ್ರದಲ್ಲಿ ಸಾಕಷ್ಟು ಹಣ ಇದೆ. ವಾಹನಗಳ ಮುಂಗಡಕ್ಕಾಗಿ ಅರ್ಜಿ ಇಲಾಖೆ ಮುಖಾಂತರ ಏನು ಬರುತ್ತಿವೆ ಆ ಪ್ರಕಾರ ಹಣದ ಮಂಜೂರು ಆಗುತ್ತಿದೆ. ಯಾವ ಪ್ರಕರಣದಲ್ಲಿ ಹಣ ಮಂಜೂರು ಆಗಿಲ್ಲವೆಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

(iii) ಸಿರಾ ತಾಲ್ಲೂಕಿನ ಬುಕ್ಕಾ ಪಟ್ಟಣದಲ್ಲಿ ವಿದ್ಯುತ್ ಕೇಂದ್ರದ ಉಪಸ್ಥಾವರ ಸ್ಥಾಪನೆ

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ಬುಕ್ಕಾಪಟ್ಟ ಹೋಬಳಿ ಕೇಂದ್ರವಾಗಿದ್ದು, ವಿದ್ಯುತ್ ಅಭಾವದಿಂದ ಜನರು ತೀವ್ರತರ ತೊಂದರೆ ಅನುಭವಿಸುತ್ತಿದ್ದು ಅಲ್ಲಿ ಒಂದು ವಿದ್ಯುತ್ ಕೇಂದ್ರದ ಉಪ ಸ್ಥಾವರ ಮಂಜೂರಾತಿಗಾಗಿ ಅನೇಕ ಮನವಿಗಳನ್ನು ಸಲ್ಲಿಸಿದಾಗ್ಯೂ ಅದು ಕಾರ್ಯಗತವಾಗಿರುವುದಿಲ್ಲ. ಕೂಡಲೇ ಉಪ ಮುಖ್ಯಮಂತ್ರಿಗಳು ಅದರ ಕಡೆ ಗಮನಹರಿಸಿ ಉಪಸ್ಥಾವರವನ್ನು ಇದೇ ವರ್ಷದಲ್ಲಿ ಮಂಜೂರಾತಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಆಶ್ವಾಸನೆ ನೀಡುವಿರಾ?